ದಿನಾಂಕ 11-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಯು.ಎಸ್.ಕೆ., ವಕೀಲರಿಂದಃ

ನಾನು ಕೃಷಿ ಸಾಗುವಳಿ ಮಾಡುತ್ತೇನೆ. ನನಗೆ ಮೂಲ ವಾದಿಯ ಮಗಳು ಮತ್ತು ಅಳಿಯ ಸಾಕ್ಷ್ಯ ನುಡಿಯಲು ಕೇಳಿಕೊಂಡಿರುತ್ತಾರೆ. ಅವರ ಹೆಸರು ಈಗ ನನಗೆ ನೆನಪಿಲ್ಲ. ಸುಮಾರು 3-4 ತಿಂಗಳ ಹಿಂದೆ ಸಾಕ್ಷ್ಯ ನುಡಿಯಲು ಕೇಳಿಕೊಂಡಿದ್ದರು. ನಾನು ಪಂಚಾತಿಕೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿಯಲು ಕೋರಿಕೊಂಡಿದ್ದರು. ನಾನು ಸದರಿ ವಾದಿಯ ಮಗಳು ಮತ್ತು ಅಳಿಯ ಹೇಳಿದ ರೀತಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು, 1 ನೇ ಪ್ರತಿವಾದಿ ಕೂಡ ಒಳ್ಳೆಯವರು, ನಾನು ಪಂಚಾತಿಕೆ ಮಾಡಿದ ಬಗ್ಗೆ ಸಾಕ್ಷ್ಯನುಡಿಯುತ್ತಿದ್ದೇನೆ ಎನ್ನುತ್ತಾರೆ.

2. ಸುಮಾರು 6-7 ವರ್ಷಗಳ ಹಿಂದೆ ಪಂಚಾತಿಕೆ ನಡೆಸಬೇಕು, ಇಲ್ಲದಿದ್ದರೆ ನಾನು ನ್ಯಾಯಾಲಯಕ್ಕೆ ಹೋಗುತ್ತೇನೆ ಎಂದು ವಾದಿಯ ಅಳಿಯ ಫ್ರಾಂಕ್ಲಿ ನನ್ನ ಬಳಿ ತಿಳಿಸಿದ್ದರು. ನಾನು 1 ನೇ ಪ್ರತಿವಾದಿಯ ಬಳಿ ಹೋಗಿ ಏನಾದರೂ ದುಡ್ಡು ಕೊಟ್ಟು ವಿವಾದ ಇತ್ಯರ್ಥಪಡಿಸಿ ಎಂದು ಹೇಳಿದ್ದೆನು. ಸದರಿ ವಿವಾದ ಯಾವಾಗ ಪ್ರಾರಂಭವಾಗಿದೆ ಎಂದು ನನಗೆ ಗೊತ್ತಿಲ್ಲ.

3. ನ್ಯಾಯಾಲಯದಲ್ಲಿ ಪಾಲು ವಿಭಾಗ ಕೋರಿ ದಾವೆ ಹಾಕಿರುತ್ತಾರೆ, ಅಷ್ಟು ಮಾತ್ರ ನನಗೆ ಗೊತ್ತು. ವಾದಿ ಶಂಕರ ಪೂಜಾರಿ ಕೋಲಾಪುರದಲ್ಲಿ ಕೆಲಸ ಮಾಡುತ್ತಿದ್ದರು. ಆತ ನನ್ನ ನೆರೆಕರೆಯವನಾಗಿದ್ದ ಕಾರಣ ಪರಿಚಿತ. ಆತನಿಗೆ 18 ವರ್ಷ ಪ್ರಾಯವಾಗಿದ್ದ ಸಮಯ ಆತ ಕೋಲಾಪುರಕ್ಕೆ ಕೆಲಸಕ್ಕೆ ಹೋಗಿದ್ದನು. ನನ್ನ ಮತ್ತು ವಾದಿಯರ ಮನೆ ಅರ್ಧ ಫರ್ಲಾಂಗು ದೂರದಲ್ಲಿ ಇದೆ. ಕೋಲಾಪುರದಿಂದ ಊರಿಗೆ ಬಂದಾಗ ನನಗೆ ಸಿಗುತ್ತಿದ್ದರು. ನನಗೆ ವಾದಿ ಆತ್ಮೀಯ ಎಂದರೆ ಸಾಕ್ಷಿ ನನಗೆ ಎಲ್ಲರೂ ಆತ್ಮೀಯರು ಎನ್ನುತ್ತಾರೆ.

4. ನನಗೆ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯದ ಬಗ್ಗೆ ಮಾಹಿತಿ ಇಲ್ಲ. ನ್ಯಾಯಾಲಯದಲ್ಲಿ ದಾವೆ ಇರುವ ಬಗ್ಗೆ ನನಗೆ ವಾದಿಯ ಮಗಳು ತಿಳಿಸಿದ್ದರು. ನ್ಯಾಯಾಲಯದ ನೋಟೀಸು ಬಂದ ನಂತರ ನಾನೇ ವಾದಿ ಪರ ವಕೀಲರನ್ನು ಭೇಟಿಯಾಗಿರುತ್ತೇನೆ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ಸದರಿ ವಕೀಲರಿಗೆ ಮಾಹಿತಿ ನೀಡಿದ್ದೆನು. ವಾದಿ ಪರ ವಕೀಲರು ನನಗೆ ಪಂಚಾತಿಕೆ ಸಮಯದ ಕರಾರೊಂದನ್ನು ತೋರಿಸಿದ್ದರು. ಸಾಕ್ಷಿ, ವಾದಿ ಶಂಕರ ಪೂಜಾರಿ ಜೀವಂತ ಇದ್ದಾಗ ಸದರಿ ಕರಾರಿಗೆ ಆತನ ಹೆಂಡತಿ ಮಕ್ಕಳು ಸಹಿ ಬೇಕೆಂದು ವಕೀಲರು ತಿಳಿಸಿದ್ದರು ಎನ್ನುತ್ತಾರೆ. ಸದರಿ ಕರಾರು ಆದ ದಿನಾಂಕ ನನಗೆ ನೆನಪಿಲ್ಲ. ನಾನು ಸದರಿ ಕರಾರನ್ನು ಓದಿ ನೋಡಿರುವುದಿಲ್ಲ. ಸದರಿ ಕರಾರನ್ನು ಯಾರು ತಯಾರಿಸಿದ್ದು ಎಂದು ನನಗೆ ಮಾಹಿತಿ ಇಲ್ಲ.

5. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿ ರಾಜಿ ಮಾಡಲು ಹತಾಶೆಯಲ್ಲಿದ್ದರು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ, ನನಗೆ ಹತಾಶೆ ಏನು ಎಂದು ಗೊತ್ತಿಲ್ಲ ಎನ್ನುತ್ತಾರೆ. ನಾನು ಒಪ್ಪಿಗೆ ಪತ್ರ ಎನ್ನುವ ದಾಖಲೆಯನ್ನು ವಾದಿಯ ಅಳಿಯನಿಗೆ ಸುಮಾರು 6-7 ವರ್ಷಗಳ ಹಿಂದೆ ನೀಡಿರುತ್ತೇನೆ. ನಾನು ಹಾಗೂ ಚಂದ್ರಶೇಖರ ಶೆಟ್ಟಿ ಅಂಬಾಗಿಲಿನ ದೇವಸ್ಥಾನದ ಬಳಿ ಸದರಿ ದಾಖಲಾತಿಯನ್ನು ವಾದಿಯ ಅಳಿಯನಿಗೆ ನೀಡಿರುತ್ತೇನೆ. 1 ನೇ ಪ್ರತಿವಾದಿ ಯಾವತ್ತೂ ಸದರಿ ಒಪ್ಪಿಗೆ ಪತ್ರವನ್ನು ವಾದಿ ಅಥವಾ ಆತನ ಹೆಂಡತಿ ಮಕ್ಕಳ ಸಹಿಗಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಪಂಚಾತಿಕೆ ಆಗದೆ ಸಹಿ ಮಾಡುವುದಿಲ್ಲ ಎಂದು ಅವರು ನಮಗೆ ತಿಳಿಸಿದ್ದರು ಎನ್ನುತ್ತಾರೆ. ವಾದಿ ಶಂಕರ ಪೂಜಾರಿ ರಾಜಿ ಮಾಡಲು ಕೇಳಿಕೊಂಡಿದ್ದನಾ ಎಂದರೆ ಸಾಕ್ಷಿ, ಸಿಕ್ಕಿದಾಗ ಏನಾದರೂ ಮಾಡಿ ಎಂದು ಹೇಳಿದ್ದನು ಎನ್ನುತ್ತಾರೆ. 1 ನೇ ಪ್ರತಿವಾದಿ ಕೂಡ ರಾಜಿ ಮಾಡುವಂತೆ ನನ್ನ ಬಳಿ ಕೇಳಿಕೊಂಡಿದ್ದಾನೆ. ವಾದಿ ಪ್ರತಿವಾದಿಯರು ನನ್ನನ್ನು ಮಧ್ಯಸ್ಥಗಾರನಾಗಿ ನೇಮಕಾತಿ ಮಾಡಿರಲಿಲ್ಲ.

6. ಒಪ್ಪಿಗೆ ಪತ್ರದಲ್ಲಿ ಹಣದ ವಿವರ ಬರೆದದ್ದು ನನಗೆ ಗೊತ್ತಿಲ್ಲ. ಸಾಕ್ಷಿ, 1 ನೇ ಪ್ರತಿವಾದಿ ಬಾಯಿ ಮಾತಿನಲ್ಲಿ ಹಣ ಕೊಡುವುದಾಗಿ ಹೇಳಿದ್ದನು ಎನ್ನುತ್ತಾರೆ. ನಾನು ಟೈಪ್ ಮಾಡಿದ ದಾಖಲೆಯನ್ನು ಫ್ರಾಂಕ್ಲಿಯವರಿಗೆ ನೀಡಿರುತ್ತೇನೆ ಎಂದರೆ ಸಾಕ್ಷಿ, ಟೈಪ್ ಮಾಡಿದ್ದೋ, ಅಥವಾ ಕೈ ಬರವಣಿಗೆಯೋ ನೆನಪಿಲ್ಲ ಎನ್ನುತ್ತಾರೆ. ಸದರಿ ದಾಖಲೆ ಕನ್ನಡ ಭಾಷೆಯಲ್ಲಿ ಇತ್ತು. ನಾನು ಹೇಳುವಂತೆ 1 ನೇ ಪ್ರತಿವಾದಿ ಯಾವುದೇ ದಾಖಲೆಯನ್ನು ನನ್ನ ಬಳಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯಾಜ್ಯ ಮತ್ತು ವಿವಾದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯರು ಹೇಳಿಕೊಟ್ಟ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.